**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.72/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರವೀಣ್ | ಪ್ರಾಸಾ-3 |
| ತಂದೆಯ ಹೆಸರು | : ಎಮ್.ಎಮ್ ರಮೇಶ್ | ಚಾಸಾ-3 |
| ವಯಸ್ಸು | : 33 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕಾರ್ಪೆಂಟರ್ | ದಿನಾಂಕಃ 25.07.2025 |
| ವಾಸಸ್ಥಳ | : ಬಣಕಲ್ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1 ರವರು ನನ್ನ ಪತ್ನಿ. ಚಾಸಾ-2 ರವರು ನನ್ನ ನಾದಿನಿ ಮಗಳು.

ದಿ.26.06.2023 ರಂದು ನಾನು ನನ್ನ ತಂದೆಯ ಮನೆಗೆ ಭೇಟಿ ನೀಡಿರುತ್ತೇನೆ. ಆ ದಿನ ರಾ.10.00 ರಿಂದ 10.15 ರ ಸಮಯಕ್ಕೆ ಚಾಸಾ-2 ರವರು ನನಗೆ ಕರೆ ಮಾಡಿ, ಆರೋಪಿಯು ನಮ್ಮ ಮನೆಗೆ ಬಂದು ಚಾಸಾ-1 ರವರ ಮೈ ಕೈ ಹಿಡಿದು ಎಳೆದಾಡುತ್ತಿರುತ್ತಾರೆ, ನೀವು ಮನೆಗೆ ಆದಷ್ಟು ಬೇಗ ಹಿಂತಿರುಗಿ ಬರಬೇಕು ಎಂದು ತಿಳಿಸಿರುತ್ತಾರೆ. ಸದರಿ ದೂರವಾಣಿ ಕರೆಯ ನಂತರ ನಾನು ಮನೆಗೆ ಹಿಂತಿರುಗಿದ ಸಂದರ್ಭದಲ್ಲಿ ಆರೋಪಿಯು ನಮ್ಮ ಮನೆಯಿಂದ ಹೊರುಟ ಹೋಗಿರುತ್ತಾರೆ. ನಂತರ ಚಾಸಾ-1 ಮತ್ತು 2 ರವರನ್ನು ಪ್ರಸ್ತುತ ಪ್ರಕರಣದ ಕುರಿತು ವಿಚಾರಿಸಲಾಗಿ ಚಾಸಾ-1 ಮತ್ತು 2 ರವರು ಮನೆಯಲ್ಲಿ ಇದ್ದ ಸಂದರ್ಭದಲ್ಲಿ ಆರೋಪಿಯು ಮನೆಗೆ ಬಂದು ಚಾಸಾ-1 ರವರೊಟ್ಟಿಗೆ ಅಸಭ್ಯ ವರ್ತನೆ ಮಾಡಿರುತ್ತಾರೆ ಮತ್ತು ಅವರೊಟ್ಟಿಗೆ ದೈಹಿಕವಾಗಿ ಆರೋಪಿಯೊಟ್ಟಿಗೆ ಸಹಕರಿಸುವಂತೆ ಚಾಸಾ-1 ರವರಿಗೆ ಹಿಂಸೆ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು 112 ನಂಬರ್ ಗೆ ಕರೆ ಮಾಡಿ ಪ್ರಕರಣದ ಕುರಿತು ವಿಚಾರವನ್ನು ತಿಳಿಸಲಾಗಿ ಪೋಲಿಸರು ಸ್ಥಳಕ್ಕೆ ಭೇಟಿ ನೀಡಿ ವಿಚಾರಣೆಯ ನಂತರ ಫೋಟೋಗಳನ್ನು ತೆಗೆದಿರುತ್ತಾರೆ. ನಂತರ ಮರುದಿನ ದೂರನ್ನು ದಾಖಲಿಸುವಂತೆ ಸೂಚಿಸಿದ ಮೇರೆಗೆ ದಿ.27.06.2023 ರಂದು ದೂರನ್ನು ದಾಖಲಿಸಿರುತ್ತೇವೆ.

ಸಾಕ್ಷಿಯು ಮುಂದುವರೆದು ಆ ದಿನ ಚಾಸಾ-1 ರವರಿಗೆ ದೂರು ದಾಖಲಿಸಿದ್ದಲ್ಲಿ ನಿನ್ನನ್ನು ಕೊಲೆ ಮಾಡುವುದಾಗಿ ಆರೋಪಿಯು ಬೆದರಿಕೆ ಹಾಕಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ**

ದೂರವಾಣಿ ಕರೆಯ ನಂತರ ನಾನು ಮನೆಗೆ ರಾ.10.00 ರ ಸಮಯಕ್ಕೆ ಹಿಂತಿರುಗಿರುತ್ತೇನೆ. ದಿ.26.06.2023 ರಂದು ಚಾಸಾ-1 ರವರು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ.

ನಾನು ಚಾಸಾ-4 ರವರ ಮನೆಯಲ್ಲಿ ಬಾಡಿಗೆದಾರನಾಗಿರುತ್ತೇನೆ ಎಂದರೆ ಸರಿ. ಅದೇ ರೀತಿ ಆರೋಪಿ ಮತ್ತು ಅವರು ಪತ್ನಿಯು ಸದರಿ ರವರ ಮನೆಯಲ್ಲಿ ಬಾಡಿಗೆಗೆ ಇರುತ್ತಾರೆ ಎಂದರೆ ಸರಿ. ಸದರಿ ಮನೆಯ ಬಳಿ ಸಿಸಿಟಿವಿ ಇರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಚಾಸಾ-1 ಮತ್ತು ಆರೋಪಿಯವರ ಪತ್ನಿ ನಡುವೆ ಪರಿಚಯವಿರುತ್ತದೆ ಎಂದರೆ ಸರಿ. ನಾನು ಆರೋಪಿಯ ಪತ್ನಿಗೆ ರೂ. 2,50,000/-ಸಾಲವನ್ನು ನೀಡಿರುತ್ತೇನೆ. ನಮ್ಮ ಮನೆಯ ಬಳಿ ಇರುವ ಬಾರ್ ನ್ನು ಆರೋಪಿಯು ಭೋಗ್ಯ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ.

ನಾನು ಆರೋಪಿಯ ಪತ್ನಿಗೆ ನೀಡಿದ ಸಾಲದ ಬಾಬ್ತು ಅವರ ಪತ್ನಿಯು ನನಗೆ ಚೆಕ್ಕನ್ನು ನೀಡಿರುತ್ತಾರೆ. ಸದರಿ ಹಣವನ್ನು ಸಂಪೂರ್ಣವಾಗಿ ಆರೋಪಿಯು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣದ ಬಾಬ್ತು ಬಡ್ಡಿಯ ಕುರಿತು ನಾನು ಆರೋಪಿ ಮತ್ತು ಅವರ ಪತ್ನಿಗೆ ಹಿಂಸೆ ನೀಡುತ್ತಿದೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನಡೆಸುತ್ತಿದ್ದ ಬಾರ್ ನ ಇತರ ಕೆಲಸಗಾರರಿಗೆ ಬಡ್ಡಿಯ ಬಾಬ್ತು ಹಣವನ್ನು ಸಾಲವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಯು ಚಾಸಾ-1 ರವರೊಟ್ಟಿಗೆ ಯಾವುದೇ ಅಸಭ್ಯ ವರ್ತನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 112 ಗೆ ಕರೆ ಮಾಡಿದ ನಂತರ ಪೋಲಿಸರು ಆರೋಪಿಯು ಹಾಕಿದ್ದ Whatsapp Status ನ ಫೋಟೋ ತೆಗೆದು ನಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಘಟನೆ ನಡೆದ ದಿನ ಆರೋಪಿಯು ಬಣಕಲ್ ಗ್ರಾಮದಲ್ಲಿ ಇರಲಿಲ್ಲ ಮತ್ತು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿ ಪತ್ನಿಯೊಟ್ಟಿಗೆ ಇರುವ ಹಣಕಾಸಿನ ವ್ಯವಹಾರದ ಬಾಬ್ತು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.